ಇ) ನೋಂದಣಿ ನಿಯಮಗಳನ್ನು ಉಲ್ಲಂಘಿಸಿ ಬೆಳಗಾಂ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಎಲ್ಲಾ ಅಭ್ಯರ್ಥಿಗಳ ಪ್ರಕರಣಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿದೆ. ಸಾಮಾನ್ಯವಾಗಿ ಬೆಳಗಾಂ ಜಿಲ್ಲೆಯಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ಮಾತ್ರ ಬೆಳಗಾಂ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಬಹುದಾಗಿದೆ.

ಈ) ಹೌದು.

ಉ) ಪರಿಶಿಷ್ಟ ಜಾತಿ; ಪಂಗಡದ ಅಭ್ಯರ್ಥಿಗಳಿಗೆ ಮೀಸಲಿಟ್ಟಿರುವ ಸ್ಥಾನಗಳನ್ನು ಆಯಾ ಪಂಗಡಗಳಿಂದಲೇ ಭರ್ತಿ ಮಾಡಬೇಕಾಗುವುದು. ಒಂದು ವೇಳೆ ಪ್ರಸ್ತುತ ನಿಯಮಗಳ ಪ್ರಕಾರ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಮೀಸಲಿರುವ ಹುದ್ದೆಗಳಿಗೆ ಸದರಿ ಗುಂಪಿನ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಭರ್ತಿ ಮಾಡಲಾಗದಿದ್ದರೆ, ಅಂತಹ ಹುದ್ದೆಗಳನ್ನು ಉಳಿದು ಹೋದ ರಿಕ್ತ ಸ್ಥಾನಗಳಿಂದು ಪರಿಗಣಿಸಿ ಮುಂದಿನ ನೇಮಕಾತಿಗೆ ಸೇರಿಸಲಾಗುವುದು.

ಊ) ಪ್ರಸ್ತುತ ಈ ಹುದ್ದೆಗಳನ್ನು ಬೇರೆ ಗುಂಪಿನ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅವಕಾಶವಿರುವುದಿಲ್ಲ.

**ತರಬೇತಿ ಪಡೆದ ನರ್ಸರಿ ಶಿಕ್ಷಕಿಯರ ಸಂಖ್ಯೆ**

501 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ತರಬೇತಿ ಪಡೆದ ನರ್ಸರಿ ಶಿಕ್ಷಕಿಯರ ಸಂಖ್ಯೆ ಎಷ್ಟು?*

ಆ) *ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ತರಬೇತಿ ಪಡೆದ ನರ್ಸರಿ ಶಿಕ್ಷಕಿಯರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರಿ ಕೈಗೊಂಡ ಕ್ರಮ ಏನು?*

ಇ) *1991-92ನೇ ಸಾಲಿನಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಹೆಚ್ಚುವರಿ ಪ್ರೌಢಶಾಲೆ ಪ್ರಾರಂಭಿಸಲು ಪ್ರಸ್ತಾವನೆ ಇದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) 2459

ಆ) ಜಿಲ್ಲಾ ಆಯ್ಕೆ ಸಮಿತಿ ಮೂಲಕ ನೇಮಕವಾದ ಶಿಕ್ಷಕರ 2 ವರ್ಷದ ಅರ್ಹತಾ ಪರೀಕ್ಷಾರ್ಥ ಸೇವೆಯ ನಂತರ ನಿಯಂತ್ರಣ ಅಧಿಕಾರಿಯು ಬರೆದ 2 ವರ್ಷದ ರಹಸ್ಯ ವರದಿಗಳ ಆಧಾರದ ಮೇಲೆ ನೇಮಕಾತಿ ಅಧಿಕಾರಿಯಾದ ಉಪ ನಿರ್ದೇಶಕರು ಸದರಿ ಉಪಾಧ್ಯಾಯರ ಸೇವೆಯು ತೃಪ್ತಿಕರವಾಗಿದ್ದಲ್ಲಿ ಅವರ ಸೇವೆಯನ್ನು ಸ್ಥಿರೀಕರಣಗೊಳಿಸುತ್ತಾರೆ.

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ 1991-92 ರಲ್ಲಿ ಪ್ರೌಢ ಶಾಲೆಯನ್ನು ತೆರೆಯಲು ಪ್ರಸ್ತಾವನೆಗಳು ಬಂದಿವೆ.

**ಪ್ರಶ್ನೆ ಪತ್ರಿಕೆಗಳು ಪರೀಕ್ಷೆಯ ಮುಂಚೆ ಬಯಲಾಗಿರುವುದರ ಬಗ್ಗೆ**

1150 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಶ್ನೆ ಪತ್ರಿಕೆಗಳು, ಪರೀಕ್ಷೆಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರತಿ ವರ್ಷ ಬಯಲಾಗಿರುವುದು ಹಾಗೂ ಇದು ಒಂದು ಕ್ರಮಬದ್ಧ ಘಟನೆಯಾಗಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಶ್ನೆ ಪತ್ರಿಕೆಗಳು ಈ ರೀತಿ ಬಯಲಾಗುತ್ತಿರುವ ಕುರಿತು ಈ ವರೆಗೆ ಸರಕಾರವು ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಲ್ಲಿ ನಾವು ಕೇಳಿದ ಪ್ರಶ್ನೆ ಬಿಟ್ಟು ಬೇರೆ ಉತ್ತರ ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇನೆ.

ಉಪಾಧ್ಯಕ್ಷರು : ಈಗ ವರದಿಯನ್ನು ಒಪ್ಪಿಸುವುದಿದೆ.

## ವರದಿಯನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ : (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ): ಮಾನ್ಯ ಉಪಾಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ 15ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

## ನಿಲುವಳಿ ಸೂಚನೆ

ಗ್ರಾಮ ಸಹಾಯಕರು ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

+ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದು ಈ ಸ್ಥಿತಿಗೆ ಬರಬಾರದಾಗಿತ್ತು. ಕಳೆದ ಮೂರು ದಿವಸಗಳಿಂದ ಕರ್ನಾಟಕ ರಾಜ್ಯದ ಗ್ರಾಮ ಸಹಾಯಕರ ಸಂಘದವರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತೂ ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. ಕಂದಾಯ ಮಂತ್ರಿಗಳಿಗೆ ಇದು ಸಂಬಂಧಪಟ್ಟಿದೆ. ಇವರ ಬೇಡಿಕೆಗಳು ಹಲವಾರು ಇವೆ. ಮುಖ್ಯವಾಗಿ ನನಗೆ ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. ಅದರಲ್ಲಿ 15 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರಿಲ್ಲ, ಸರ್ಕಾರದಿಂದ ಅವರಿಗೆ ರೆಸ್ಪಾನ್ಸ್ ಇಲ್ಲ, ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಂಡು ಪ್ರಸ್ತಾಪ ಮಾಡಿ ಸಮಸ್ಯೆ ಬಗೆಹರಿಸಿ ಎಂದು ಬಹಳ ನೊಂದುಕೊಂಡು ನನಗೆ ಬರೆದಿದ್ದಾರೆ.

(ಸದನದಲ್ಲಿ ವಿದ್ಯುಚ್ಛಕ್ತಿ ಸ್ಥಗಿತವಾಯಿತು)

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯಕ್ಕೆ ವಿದ್ಯುಚ್ಛಕ್ತಿ ಮಂಡಳಿ ಕೊಡುತ್ತಿರುವ ಕೊಡುಗೆ ಇದು. ವಿದ್ಯುಚ್ಛಕ್ತಿ ರಾಜ್ಯಕ್ಕೂ ಇಲ್ಲ, ಶಾಸನಸಭೆಗೂ ಇಲ್ಲ. ಈ ಪರಿಸ್ಥಿತಿಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ಈ ಬಗ್ಗೆ...

ಉಪಾಧ್ಯಕ್ಷರು : ನಿಲುವಳಿ ಸೂಚನೆ ಕಳುಹಿಸಿದ್ದೀರಿ. ನಾಳೆ ದಿವಸ ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ತೆಗೆದುಕೊಳ್ಳೋಣ.